## <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

## <u>SC 15/2023</u>

**P.W.-12**
**C.W.-16**

ಹೆಸರು : ಚಲುವರಾಜು

ತಂದೆಯ ಹೆಸರು : ವೆಂಕಟಪ್ಪ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ

ವಾಸಸ್ಥಳ : ಮೈಸೂರು

**<u>ದಿನಾಂಕಃ 26.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –</u>**

2. ನಾನು 2019 ರಿಂದ 2024 ರವರೆಗೆ ನಾನು ಉದಯಗಿರಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

3. ದಿ.02.12.2021 ರಂದು ನಾನು ಠಾಣೆಯ ಎಸ್ ಹೆಚ್ ಒ ಆಗಿ ಕರ್ತವ್ಯದಲ್ಲಿದ್ದಾಗ, ಅಯುಬ್ ಮತ್ತು ಪಕ್ಕದ ಮನೆಯವರು ಗಲಾಟೆ ಮಾಡಿರುವ ವಿಚಾರವಾಗಿ, ಹೆಚ್ ಸಿ 163 ರವರು ಫಿರ್ಯದುದಾರರಾದ ಫರ್ಜಾನಾರವರ ಹೇಳಿಕೆಯನ್ನು ಪ್ರಜ್ವಲ್ ಆಸ್ಪತ್ರೆಯಿಂದ ಪಡೆದುಕೊಂಡು, ತಂದು ನನ್ನ ಮುಂದೆ ಹಾಜರುಪಡಿಸಿದಾಗ, ಅದನ್ನು ಪಡೆದುಕೊಂಡು ನಾನು ಠಾಣಾ ಮೊಕದ್ದಮೆ ಸಂಖ್ಯೆ 171/20 ಕಲಂ 307 ಸಹ ವಾಚಕ 34 ಐಪಿಸಿ ಅಡಿಯಲ್ಲಿ ಪ್ರಕರಣ

ದಾಖಲಿಸಿ, ಪ್ರ.ವ.ವ.ಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡಗಳನ್ನು ಚಾಸಾ.17 ರವರಿಗೆ ಹಸ್ತಾಂತರಿಸಿರುತ್ತೇನೆ.

4. ಹೆಚ್ ಸಿ-163 ರವರು ತಂದು ಹಾಜರುಪಡಿಸಿದ ಹೇಳಿಕೆ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪ್ರಥಮ ವರ್ತಮಾನ ವರದಿ ಆಗಿದ್ದು, ಅದನ್ನು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –</u>**

5. ಚಾಸಾ.15 ರವರಿಗೆ ಚಾಸಾ.1 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಬರುವಂತೆ ಹೇಳಿರುತ್ತೇನೆ ಎಂದು ಹೇಳಿದ್ದು, ಅವರಿಗೆ ಲಿಖಿತವಾಗಿ ಆದೇಶ ನೀಡಿರುತ್ತೀರಿಯೆ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಪ್ರಕರಣ ದಾಖಲಿಸುವ ಮುಂಚೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ವಿಚಾರಿಸಿರುತ್ತೀರಿಯ ಎಂದರೆ ಸಾಕ್ಷಿಯೂ ಭೇಟಿ ನೀಡಿ ವಿಚಾರಿಸಿರುತ್ತೇನೆ ಎಂದು ನುಡಿಯುತ್ತಾರೆ. ಯಾರನ್ನು ವಿಚಾರಿಸುತ್ತೀರಿ ಎಂದರೆ ಸಾಕ್ಷಿಯೂ ಮೊಹಮದ್ ಇರ್ಷಾದ್ ಎಂದು, ಪಕ್ಕದ ಮನೆಯವರನ್ನು ವಿಚಾರಿಸುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ 7-8 ಜನ ಇದ್ದರು ಎಂದು ನುಡಿಯುತ್ತಾರೆ. ಸದರಿ 7-8 ಜನರ ಹೆಸರುಗಳು

ನಿಮಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯೂ ಅಯಬ್ , ಇರ್ಷಾದ್ ಮತ್ತು ಬೇರೆಯವರು ಇದ್ದರು ಎಂದು ನುಡಿಯುತ್ತಾರೆ. ಅವರುಗಳೆಲ್ಲ ಅಲ್ಲಿಯೇ ವಾಸ ಮಾಡುತ್ತಾರೆಯೇ ಎಂದರೆ ಸಾಕ್ಷಿಯೂ ಅವರು ಅಕ್ಕ ಪಕ್ಕದವರೇ ಆಗಿರುತ್ತಾರೆ ಎಂದು ನುಡಿಯುತ್ತಾರೆ.

6. ಆರೋಪಿ ಮನೆ ಮತ್ತು ದೂರುದಾರರ ಮನೆ ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯೂ 2 ಮನೆ ಅಕ್ಕ ಪಕ್ಕದಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ವಿಚಾರಣೆ ಮಾಡುವ ಕಾಲಕ್ಕೆ ಫೋಟೋಗಳನ್ನು ತೆಗೆದಿರುವುದಿಲ್ಲ. ಕಲಂ 324, 504, ಮತ್ತು ಬೇರೆ ಕಲಂಗಳಿಗೆ ಸಂಬಂಧಪಟ್ಟಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರ.ವ.ವ.ಯಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯೂ ಇರುತ್ತದೆ ಎಂದು ನುಡಿಯುತ್ತಾರೆ.

7. ಚಾಸಾ.15 ರವರು ಹೇಳಿಕೆ ದೂರನ್ನು ತಂದಿರುತ್ತಾರೆ ಎಂದು ಹೇಳಿದ್ದು, ಅವರ ಜೊತೆ ದೂರುದಾರರ ಪರಿಚಯದವರು ಯಾರು ಬಂದಿದ್ದರು ಎಂದರೆ ಸಾಕ್ಷಿಯೂ ಅವರ ಸಂಬಂಧಿಕರು ಬಂದಿದ್ದರು ಎಂದು ನುಡಿಯುತ್ತಾರೆ. ಚಾಸಾ.15 ರವರ ಜೊತೆಗೆ ಠಾಣೆಗೆ ಫಾರೂಕ್ ಪಾಷಾ ಚಾಸಾ.4 ಬಂದಿದ್ದರು ಎಂದರೆ ಸರಿ. ಚಾಸಾ.15 ರವರ ಜೊತೆಗೆ ಚಾಸಾ.4 ರವರ ಬಂದು, ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿ ವಿಚಾರಣೆ ಮಾಡಿರುವುದಿಲ್ಲ, ಚಾಸಾ.4 ರವರು ಠಾಣೆಗೆ ಬಂದಿದ್ದರಿಂದ ಚಾಸಾ.1 ಮತ್ತು 2 ರವರಿಗೆ ಅನುಕೂಲವಾಗಲು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**S.C.No.15/2023**
**P.W.-12**
**C.W.-16**

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.